2. ವರದಿಗಳನ್ನೊಪ್ಪಿಸುವುದು

ಅಧ್ಯಕ್ಷರು : ನಾನು ಕೃಷಿ ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎ. ನಾಗರಾಜು : ಮಾನ್ಯ ಅಧ್ಯಕ್ಷರೆ, ವಿಷಯ ಸಮಿತಿಯ ಅಧ್ಯಕ್ಷನಾಗಿ ನಾನು ಇಂಧನ ಇಲಾಖೆಯ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು : ಹಣಕಾಸು, ಸಾಂಸ್ಥಿಕ ಹಣಕಾಸು, ಸಾಂಖಿಕ ಮತ್ತು ಯೋಜನೆ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಇಲಾಖೆಯ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ದಿನೇಶ ಗುಂಡುರಾವ್ : ಮಾನ್ಯ ಅಧ್ಯಕ್ಷರೆ, ವಿಷಯ ಸಮಿತಿಯ ಅಧ್ಯಕ್ಷನಾಗಿ ನಾನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಾರ್ತಾ ಮತ್ತು ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಹಕಾರ ಇಲಾಖೆಯ 2003–04ನೇ ಸಾಲಿನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನಾನು ಜಲಸಂಪನ್ಮೂಲ ಹಾಗೂ ಲೋಕೋಪಯೋಗಿ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಇಲಾಖೆಯ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಒಳಾಡಳಿತ ಮತ್ತು ಸಾರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶಿಕ್ಷಣ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗಳ 2003–04ನೇ ಸಾಲಿನಲ್ಲಿ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕಂದಾಯ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಮಾಜಕಲ್ಯಾಣ, ಕಾರ್ಮಿಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಹಾಗೂ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ 2003–04ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ವರದಿಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು : ಶ್ರೀ ಯಾವಗಲ್‌ರವರೇ, ತಾವು ಈಗ ಭಾಷಣವನ್ನು ಪ್ರಾರಂಭ ಮಾಡಬಹುದು.

3. ರಾಜ್ಯದಲ್ಲಿ ಬರಗಾಲದ ಸ್ಥಿತಿಯ ಬಗ್ಗೆ (ಮುಂದುವರೆದ ಚರ್ಚೆ)

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿದ್ದೆ, ಇವತ್ತು ಈ ರೀತಿಯಾಗಿ ಬಂದು ಒದಗಿದಂತಹ ಪ್ರಕೃತಿ ವಿಕೋಪವನ್ನು ಇವತ್ತು ನಾವು ಬಹಳ ಸಂಘಟಿತವಾಗಿ ಎದುರಿಸದಿದ್ದರೆ ಅದು ರಾಜ್ಯಸರ್ಕಾರ ಇರಬಹುದು. ಕೇಂದ್ರ ಸರ್ಕಾರವಿರಬಹುದು. ಸ್ಥಳೀಯ ಸಂಸ್ಥೆಗಳು ಇರಬಹುದು ಮತ್ತು ಯಾವುದೇ ನೆರವು ಇರಬಹುದು. ಇವರೆಲ್ಲರೂ ಸೇರಿ ಜನ ಸಹಕಾರ ಮಾಡಿ ಎದುರಿಸದಿದ್ದರೆ ಬಹುತೇಕ ಈ ಸನ್ನಿವೇಶವನ್ನು ಇದೇ ರೀತಿಯಾಗಿ ಪರಿಸ್ಥಿತಿಯು ಮುಂದುವರಿದರೆ ಈ ಸನ್ನಿವೇಶವು ನಮ್ಮ ಕೈ ಮೀರಿ ಹೋಗುವಂತಹ ಸನ್ನಿವೇಶವು ಇದೆ ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತು ಕೃಷಿಕೂಲಿಕಾರರು ಇರಬಹುದು ಸಣ್ಣ ಮತ್ತು ಅತಿ ಸಣ್ಣ ರೈತರು ಇರಬಹುದು. ಮಧ್ಯಮ ವರ್ಗದ ರೈತರು ಇರಬಹುದು. ಒಟ್ಟಾರೆಯಾಗಿ ರೈತ ಜನಾಂಗವಿರಬಹುದು. ಮತ್ತು ಕೆಲಸ ಇಲ್ಲದಂತಹ ಪಟ್ಟಣ ಜನತೆಯೂ ಸಹಿತ ಹಳ್ಳಿಯ ಮೂಲೆಯಿಂದ ಬಂದು ಕೆಲಸ ಮಾಡಬೇಕಾಗಿತ್ತೋ, ಅವರಿಗೆ ಕೆಲಸ ಸಿಗುವುದಾಗಿತ್ತು. ಅವರು ಪಟ್ಟಣಕ್ಕೆ ಬಂದು ಕೆಲಸ ಮಾಡುವಂತಹ ಜನ ಇರಬಹುದು.

ಅಧ್ಯಕ್ಷರು : ರಾಮದಾಸ್‌ರವರೇ, You please hear me ನಿಮಗೆ ಮಾತನಾಡುವುದಕ್ಕೆ ಇಷ್ಟವಿಲ್ಲದಿದ್ದರೆ ಬೇರೆ ಸದಸ್ಯರ ಹಕ್ಕನ್ನು ನೀವು ಏತಕ್ಕಾಗಿ ಮೊಟಕು ಮಾಡುತ್ತೀರಿ? ಅವರ ಹಕ್ಕನ್ನು ನೀವು ಏತಕ್ಕಾಗಿ ಮೊಟಕು ಮಾಡುತ್ತೀರಿ? No, no,

ಶ್ರೀ ಅಪ್ಪಾಜಿ ಎಸ್. ನಾಡಗೌಡ (ಸರ್ಕಾರಿ ಮುಖ್ಯ ಸಚೇತಕರು) : ಸನ್ಮಾನ್ಯ ಸಭಾಧ್ಯಕ್ಷರೇ.....

ಅಧ್ಯಕ್ಷರು : ನಿಮ್ಮ ನೋಟೀಸ್ ಮೇಲೆಯೇ ನಾನು ಅಲೋ ಮಾಡುತ್ತಿರುವುದು. ಅವರ ನೋಟೀಸ್ ಮೇಲೆ ಅಲ್ಲ. Any person has got power to speak ಯಾರೇ ನೋಟೀಸ್ ಕೊಟ್ಟಿರಲಿ, ಅವರು ಸಭೆಯಲ್ಲಿ ಮಾತನಾಡುವ ಹಕ್ಕು ಇದೆ. When I allow some notice some notice under rule 69, every member has got right to speak ಅವರು ಮೂವ್ ಮಾಡಿದ ಮೇಲೆ ನೀವು ಮಾತನಾಡಬಹುದು. ಅದರಲ್ಲಿ ತೊಂದರೆ ಏನೂ ಇಲ್ಲ.